ರಾಜ್ಯದಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳು

365 (3243) ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 633

ಆ) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿರುವ ವೈದ್ಯರುಗಳನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು 573 ವೈದ್ಯರನ್ನು ನೇಮಕ ಮಾಡುವ ಸಮಯದಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶಿಕ್ಷಕರು-ವಿದ್ಯಾರ್ಥಿಗಳ ಪ್ರಮಾಣ

366 (3444) ಶ್ರೀ ಗೋಪಾಲ ಭಂಡಾರಿ. ಹೆಚ್. (ಕಾರ್ಕಳ) : ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇರುವ ಹೆಚ್ಚುವರಿ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಉಡುಪಿ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ತಾಲ್ಲೋಕುವಾರು ಎಷ್ಟು ?

ಇ) ಪೂರ್ವ ಪ್ರಾಥಮಿಕ ಶಾಲೆಗಳ ತರಗತಿಗಳನ್ನು ಮುಚ್ಚಲಾಗಿರುವ ಸ್ಥಳದಲ್ಲಿ ಬದಲಿ ವ್ಯವಸ್ಥೆ ಆಗಿದೆಯೇ? ಮತ್ತೆ ಅಲ್ಲಿದ್ದ ಶಾಲಾ ಮಾತೆ ಮತ್ತು ಆಯಾವರುಗಳ ಭವಿಷ್ಯವೇನು ? (ವಿವರ ಒದಗಿಸುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೆಚ್ಚುವರಿ ಶಿಕ್ಷಕರ ಸಂಖ್ಯೆ

ಸರ್ಕಾರಿ ಕಿರಿಯ	7486
ಪ್ರಾಥಮಿಕ ಶಾಲೆ	
ಸರ್ಕಾರಿ ಹಿರಿಯ	0428
ಪ್ರಾಥಮಿಕ ಶಾಲೆ	

ಆ) ದಕ್ಷಿಣ ಕನ್ನಡ ಜಿಲ್ಲೆ :-

ತಾಲ್ಲೂಕು :-	ಹೆಚ್ಚುವರಿ ಶಿಕ್ಷಕರು ಕಿರಿಯ ಪ್ರಾಥಮಿಕ ಶಾಲೆ	ಹಿರಿಯ ಪ್ರಾಥಮಿಕ ಶಾಲೆ
1. ಬೆಳ್ತಂಗಡಿ	62	-
2. ಭಂಟವಾಳ	18	-
3. ಮಂಗಳೂರು	-	-
4. ಪುತ್ತೂರು	-	246
5. ಸೂಳ್ಯ	27	-

ಉಡುಪಿ ಜಿಲ್ಲೆ :-

ತಾಲ್ಲೂಕು	ಹೆಚ್ಚುವರಿ ಶಿಕ್ಷಕರು ಕಿರಿಯ ಪ್ರಾಥಮಿಕ ಶಾಲೆ	ಹಿರಿಯ ಪ್ರಾಥಮಿಕ ಶಾಲೆ
1. ಕಾರ್ಕಳ (ಉ)	44	-
2. ಕಾರ್ಕಳ (ದ)	04	-
3. ಉಡುಪಿ (ದ)	06	22
4. ಉಡುಪಿ (ಉ)	23	-
5. ಕುಂದಾಪುರ	60	0

(ಇ) ಬದಲಿ ವ್ಯವಸ್ಥೆ ಮಾಡಲಾಗಿದೆ. ಶಾಲಾ ಮಾತೆ ಮತ್ತು ಆಯಾ ಅವರನ್ನು ಸಮೀಪದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನಿಯುಕ್ತಿಗೊಳಿಸಲು ಕ್ರಮ ಜರುಗಿಸಿದೆ.

ರ್‍ಯಾಗಿಂಗ್ ತಡೆಗಟ್ಟುವುದು

367 (3288) ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ರ್‍ಯಾಗಿಂಗ್ ಹಾವಳಿ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

(ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

(ಅ) 1993 ಕರ್ನಾಟಕ ಶಿಕ್ಷಣ ಅಧಿನಿಯಮದ 2(29)ನೇ ಪ್ರಕರಣದಲ್ಲಿ 'ರ್‍ಯಾಗಿಂಗ್' ಪದವನ್ನು ವ್ಯಾಖ್ಯಾನಿಸಲಾಗಿದೆ. 116ನೇ ಪ್ರಕರಣದಲ್ಲಿ ರ್‍ಯಾಗಿಂಗ್‌ನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಯಾವುದೇ ವ್ಯಕ್ತಿ ಅದನ್ನು ಉಲ್ಲಂಘಿಸಿದಲ್ಲಿ ಅವರು ಒಂದು ವರ್ಷದ ಸಜೆ ಮತ್ತು : ಹಾಗೂ ಎರಡು ಸಾವಿರ ರೂಪಾಯಿವರೆಗಿನ ದಂಡಕ್ಕೆ ಶಿಕ್ಷೆಗೆ ಒಳಗಾಗುತ್ತಾರೆ. ಸದರಿ ಉಪಬಂಧವಲ್ಲದೆ ಭಾರತೀಯ ದಂಡ ಸಂಹಿತೆಯ ಅನೇಕ ಉಪಬಂಧಗಳ ಪ್ರಕಾರವು ಶಿಕ್ಷಾರ್ಹವಾಗಿದೆ. ಡೈರಕ್ಟರ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ 940ನೇ ಸಂಖ್ಯೆಯ ಸ್ಥಾಯಿ ಆದೇಶದ ಪ್ರಕಾರ ಕಠಿಣ ಕ್ರಮ ಜರುಗಿಸಲಾಗುತ್ತದೆ. ಅಂತಹ ಆರೋಪಗಳು ಸಂಜ್ಞೆಯ ಮತ್ತು ಜಾಮೀನುರಹಿತವಾಗಿರುತ್ತದೆ. ಪ್ರಚೋದನೆ ನೀಡುವವರು ಹಾಗೂ ದುಸ್ಪ್ರೇರಣೆ ನೀಡುವವರು ತದ್ರೂಪದ ಶಿಕ್ಷೆಗೆ ಒಳಗಾಗುತ್ತಾರೆ.